# ವೈದಿಕ ದರ್ಶನ ಮತ್ತು ಭಾರತೀಯ ಸಂಸ್ಕೃತಿ

ಶ್ರೀ ಜಿ.ಎನ್. ಚಕ್ರವರ್ತಿ

ವೈದಿಕದರ್ಶನದ ಜೀವನಧ್ಯೇಯ ಹಾಗೂ ಭಾರತೀಯ ಜೀವನದ ಎಲ್ಲ ಕ್ಷೇತ್ರಗಳಿಗೂ ಹೇಗೆ ಅದು ದಾರಿದೀಪವಾಗಿದೆ ಎನ್ನುವುದನ್ನು ಈ ಪ್ರಬುದ್ಧ ಲೇಖನ ತಿಳಿಸುತ್ತದೆ. ಹಿಂದಿನ ತಲೆಮಾರಿನ ಪ್ರಕಾಂಡ ವೈದಿಕ ವಿದ್ವಾಂಸರಲ್ಲಿ ಒಬ್ಬರಾದ ಶ್ರೀ ಜಿ.ಎನ್. ಚಕ್ರವರ್ತಿಯವರ 'ಋಕ್ಸಂಹಿತಾ ಸಾರ' ಎಂಬ ಅಮೂಲ್ಯ ಗ್ರಂಥದ ಸವಿಸ್ತಾರವಾದ ಪೀಠಿಕೆಯ ಕೆಲವು ಭಾಗಗಳ ಸರಳ ಸಾರಾಂಶವಿದು. ಶ್ರೀಯುತರು ನಿವೃತ್ತ ಸಂಸ್ಕೃತ ಪ್ರಾಧ್ಯಾಪಕರು. ೯೭ ವರ್ಷ ವಯಸ್ಸಿನ ಜ್ಞಾನವೃದ್ಧರಾದ ಇವರು ಕನ್ನಡ ಮತ್ತು ಆಂಗ್ಲಭಾಷೆಗಳಲ್ಲಿ ಹಲವಾರು ಕೃತಿಗಳನ್ನು ರಚಿಸಿದ್ದಾರೆ.

## ಋಷಿದೃಷ್ಟಿ

ಜಗತ್ತಿನ ಇತಿಹಾಸಕ್ಕೆ ಸುಂದರವಾದ ಧ್ಯೇಯವಿದೆ, ಅರ್ಥವಿದೆಯೆನ್ನುವುದೇ ಭಾರತದ ಋಷಿಗಳ ದರ್ಶನವೂ ಹೌದು, ಸನಾತನ ಶ್ರದ್ಧೆಯೂ ಹೌದು. ಋಷಿದೃಷ್ಟಿಗೆ ಜಗತ್ತೆಲ್ಲ ಕಾವ್ಯಾತ್ಮಕವಾಗಿಯೂ ಸುಂದರವಾಗಿಯೂ ಕಂಡಿತು. ವಿಶ್ವವ್ಯವಹಾರವೆಲ್ಲ ಚೈತನ್ಯಪ್ರೇರಿತ, ನಿಯಮಪಾಲಿತ; ಅಣುವಿನಿಂದ ಮಹತ್ತಿನವರೆಗೆ ಸಕಲ ಪ್ರಪಂಚವೂ ಈಶ್ವರತತ್ತ್ವದ ಅಂಶ; ಸೃಷ್ಟಿ ಸ್ಥಿತಿ ಲಯಗಳೆಲ್ಲ ಈಶ್ವರಾಂಶವಾದ ಅಲೆಗಳಂತೆ ಇವೆ; ಎಷ್ಟೇ ಅಲ್ಪವಾದರೂ ವಿಶ್ವದ ಪ್ರತಿಯೊಂದು ಅಂಶವೂ ಅದರ ಅನಂತತ್ವದ ಸಂಪತ್ತನ್ನು ಸೂಚಿಸುತ್ತದೆ; ಈಶ್ವರತತ್ತ್ವಕ್ಕಿಂತ ಜಗತ್ತು ಬೇರೆಯಲ್ಲ; ಈ ಮೂಲತತ್ತ್ವವೇ ಸಕಲ ಜಗತ್ತಿನ ಜೀವನಾಡಿ. ಆದ್ದರಿಂದ ಸಕಲ ವೈಯಕ್ತಿಕ ವ್ಯವಹಾರವೂ ಅದರ ಸ್ವರೂಪಪ್ರಕಾಶನವೇ ಆಗಿದೆ; ಈ ಪ್ರಕಾಶನ ಲಯಬದ್ಧ, ಸುಂದರ ಮತ್ತು ಆನಂದಾತ್ಮಕ; ವಿಶ್ವರಹಸ್ಯದರ್ಶನಕ್ಕೆ ಅರ್ಹತೆ ಇರುವ ಕವಿಹೃದಯಕ್ಕೆ ಇದು ಗೋಚರವಾಗಿ ಆನಂದವನ್ನೀಯುತ್ತದೆ—ಇದೇ ವೈದಿಕ ಋಷಿಗಳ ವಿಶ್ವಸಮನ್ವಯ ಸಿದ್ಧಾಂತ, ಅನುಭವದಿಂದ ಸ್ಫುರಿಸಿದ ವಿಶ್ವಾತ್ಮಕದರ್ಶನ.

ಮಾನವನ ಚೇತನಾತ್ಮಕವಾದ ಅಂತರಂಗಪ್ರಪಂಚಕ್ಕೂ ಮತ್ತು ಅಚೇತನವೆಂದು ತೋರುವ ಬಾಹ್ಯ(ಪ್ರಕೃತಿ) ಪ್ರಪಂಚಕ್ಕೂ ಪ್ರತ್ಯೇಕತೆಯಿಲ್ಲ. ಎರಡೂ ಒಂದೇ ತತ್ತ್ವದ ಅಂಶಗಳು. ಸೃಷ್ಟಿಯಲ್ಲಿನ ಸಾಮರಸ್ಯ ಕೇವಲ ದಾರ್ಶನಿಕ ಪ್ರಕ್ರಿಯೆ ಅಥವಾ ಪಾರಿಭಾಷಿಕ ಪ್ರಯೋಗವಲ್ಲ; ಮಾನವನಿಗೂ ಬಾಹ್ಯಪ್ರಕೃತಿಗೂ ಇರುವುದು ಕೇವಲ ಭೌತಿಕಸಂಬಂಧ ಮಾತ್ರವಲ್ಲ. ಅದು ಚೈತನ್ಯಾತ್ಮಕ ಸಂಬಂಧ, ಅಖಂಡತೆಯ ಸಂಬಂಧ.

ಮಾನವನು ಈ ತತ್ತ್ವವನ್ನರಿತು ಜಗತ್ತಿನೊಡನೆ ಶಾಂತಿಯುತವಾದ ಮತ್ತು ಆನಂದಮಯವಾದ ಸಂಬಂಧವನ್ನು ಬೆಳೆಸಿ, ವಿಶ್ವಶಾಂತಿಗೆ ಸಾಧಕನಾಗಿರಬೇಕೆಂಬುದೇ ವೈದಿಕ ಋಷಿಗಳ ಸಂದೇಶ. ಮಾನವನ ಜೀವನದ ಪ್ರತಿಯೊಂದು ಕ್ರಿಯೆಯೂ, ಸುತ್ತಮುತ್ತಲಿನ ಸನ್ನಿವೇಶದೊಡನಿರುವ ಸಂಬಂಧವೂ, ಸುಖದುಃಖಗಳ ಅನುಭವ ಮತ್ತು ಪ್ರತಿಕ್ರಿಯೆಗಳೂ ಜಗತ್ಸ್ಪಂದನದ ಅಂಶ ಮಾತ್ರ, ಆದ್ದರಿಂದ, ಈಶ್ವರಸಂಕಲ್ಪದ ಫಲವಾದ ಮತ್ತು ಈಶ್ವರ ಸ್ವರೂಪಪ್ರಕಾಶಕವಾದ ಈ ಜಗತ್ಸ್ಪಂದನದಲ್ಲಿ ತಾನೂ ಭಾಗವಹಿಸುತ್ತೇನೆಂಬ ಅರಿವುಂಟಾದಾಗ ಮಾತ್ರ ಮಾನವನ ಜೀವನದ ಕ್ರಮ ಉತ್ತಮಗೊಳ್ಳುವುದು.

## ವಿಶ್ವನಿಯಮ

ಪೃಥ್ವಿಯೇ ವಿಶ್ವದ ಕೇಂದ್ರವಲ್ಲ, ಕೇವಲ ಮಾನವನ ಸೌಖ್ಯವೇ ವಿಶ್ವನಿಯಮದ ಗುರಿಯಲ್ಲ. ಮಾನವನು ವಿಶ್ವದ ಪ್ರಜೆಯಾದ್ದರಿಂದ ವಿಶ್ವಪ್ರಭುವಾದ ಭಗವಂತನ ನಿಯಮವನ್ನು ಅವನು ಪಾಲಿಸಬೇಕು. ತನ್ನ ವೈಯಕ್ತಿಕ, ಸಾಮಾಜಿಕ ಮತ್ತು ರಾಜಕೀಯ ವ್ಯವಹಾರಗಳನ್ನು ಲಯಬದ್ಧವಾಗಿಸಿಕೊಳ್ಳಬೇಕು. ಜೀವನವೆಲ್ಲ ಸುಂದರವೂ ಮಂಗಳಕರವೂ ಆಗಿರಬೇಕು. ಸೃಷ್ಟಿಯ ಆಧಾರ, ಗುರಿ ಎರಡೂ ಆನಂದಮಯವಾದುದರಿಂದ ಕಾಣಿಸುವ ಜಗತ್ತೂ ಆನಂದಮಯವೇ. ಈ ಆನಂದವು ನಿಯಮರಹಿತವಾದ ಸ್ವಚ್ಛಂದ ಪ್ರವೃತ್ತಿಯ ಫಲವಲ್ಲ. ವಿಶ್ವನಿಯಮದ ಮೂಲಕ ಪ್ರಕಾಶಿತವಾಗುವ ನಿತ್ಯಾನಂದ.

ಮೂಲತತ್ತ್ವವಾದ ಭಗವತ್ ತತ್ತ್ವವೇ ಜಗತ್ತಿನ ರೂಪದಲ್ಲಿ ಪ್ರಕಾಶಿಸುವುದರಿಂದ ಜಗತ್ತಿನ ವ್ಯವಹಾರ ನಿಯಮರಹಿತವಾದ ಚಲನವಲನಗಳಲ್ಲ. ಜಗತ್ತಿನ ಪ್ರಕಟನೆ, ಚಲನೆ ಮತ್ತು ಅದರ ವ್ಯವಹಾರಗಳೆಲ್ಲ ಚೈತನ್ಯಯುಕ್ತವಾದುದು. ಆನಂದ ಪ್ರಕಾಶನವೇ ಜಗತ್ತಿನ ಸೃಷ್ಟಿಯ ಲಕ್ಷ್ಯ. ಜಗತ್ ಪ್ರವಾಹವೆಲ್ಲ ಲಯಬದ್ಧ, ಸುಂದರ. ಇದಕ್ಕೆ ಪ್ರೇರಕವೂ ನಿಯಾಮಕವೂ ಆದ ಮೂಲಶಕ್ತಿಯನ್ನೇ ಋಷಿಗಳು **'ಋತ'** ಎಂದು ಕರೆದರು. ಈ ಮೂಲಶಕ್ತಿಗೆ ಅನುಗುಣವಾದ ಲೌಕಿಕ ವ್ಯವಹಾರವನ್ನೇ **'ಧರ್ಮ'** ಎಂದು ಹೆಸರಿಸಿದರು. ವಿಶ್ವನಿಯಮಕ್ಕೆ ಬದ್ಧವಾದ ಎಲ್ಲವೂ **'ಋತಪಾಲಕ'**ವೇ ಆಗಿರುವುದರಿಂದ, ಜಗತ್ತಿನ ಕ್ರಿಯಾಶಕ್ತಿ, ವ್ಯವಹಾರ ನಿಯಮಗಳನ್ನೂ ಸಹ 'ಋತ' ಶಬ್ದದಿಂದಲೇ ವೈದಿಕ ಋಷಿಗಳು ನಿರ್ದೇಶಿಸಿದ್ದಾರೆ.

ಋತರೂಪವಾದ ವಿಶ್ವನಿಯಮ ಎಷ್ಟು ಆನಂದದಾಯಕವೋ ಅಷ್ಟೇ ದುಃಖದಾಯಕವೂ ಆಗಿದೆ. ಋಷಿಗಳು ವಿಶ್ವದಲ್ಲಿ ಕಾವ್ಯಾತ್ಮಕವೂ ಗಾನಾತ್ಮಕವೂ ಆದ ಸೌಂದರ್ಯವನ್ನು ಸಾಕ್ಷಾತ್ಕರಿಸಿ ಅದರ ಫಲವಾದ ಆನಂದವನ್ನು ಪ್ರಕಾಶಪಡಿಸಿದರು. ಅದರ ಜೊತೆಯಲ್ಲಿಯೇ, ನಿತ್ಯದಲ್ಲಿ ಅನಿತ್ಯವನ್ನೂ

ಅಮೃತತ್ವದ ನಡುವೆ ಮರಣವನ್ನೂ, ಅಭಿವೃದ್ಧಿಯ ನಡುವೆ ಅಳಿಮತೋಗುವುದನ್ನೂ, ಸೌಂದರ್ಯದ ನಡುವೆ ವಿಕಾರವನ್ನೂ ಕಂಡರು. ಆದರೆ, ಮಾನವನಿಗೆ ಸಂಕುಚಿತ ದೃಷ್ಟಿಯಿದ್ದರೆ ಮಾತ್ರ ಈ ಮರಣವಿಕಾರಗಳು ದುಃಖಕಾರಕವೆಂದು ಜೊತೆಯಲ್ಲೇ ಅರಿತರು. ಆದ್ದರಿಂದ, ಮರಣಾದಿ ಕ್ಷೋಭೆಗಳಿಂದ ಕುಗ್ಗದೆ ಅವನ್ನೂ ವಿಶ್ವಸತ್ಯದ ಅಂಶಗಳೆಂದೇ ಋಷಿಗಳು ವರ್ಣಿಸಿದ್ದಾರೆ. ಅವೆಲ್ಲವನ್ನೂ ವ್ಯಾಪಿಸಿಯೂ, ಅವೆಲ್ಲವನ್ನೂ ಮೀರಿಯೂ ಇರುವ ವಿಶ್ವಸೌಂದರ್ಯದ ಅನುಭವವೇ ವ್ಯಕ್ತಿಯ ಗುರಿಯೆಂದು ಸಾರಿದ್ದಾರೆ. ಅವರು ಅಸತ್ಯಕ್ಕಿಂತ ಸತ್ಯದಲ್ಲಿ ಅಧಿಕವಾದ ಶ್ರದ್ಧೆಯನ್ನಿಟ್ಟರು. ಮೃತ್ಯುವಿನ ಮೂಲಕ ಅಮೃತತ್ವವನ್ನು ಅಪೇಕ್ಷಿಸಿದರು. ಕತ್ತಲಿಂದಾಚೆ ಜ್ಯೋತಿಯ ಸಾಕ್ಷಾತ್ಕಾರಕ್ಕೆ ಆಶಿಸಿದರು. ಅಸತ್ಯವನ್ನೂ, ಕತ್ತಲನ್ನೂ ಮತ್ತು ಮೃತ್ಯುವನ್ನೂ ಗೆದ್ದರು. ವಿಶ್ವಪ್ರಕಾಶಕವೂ ಶಾಶ್ವತವೂ ಆದ ದಿವ್ಯಜ್ಯೋತಿಯ ಸೌಂದರ್ಯಸಾಕ್ಷಾತ್ಕಾರದ ಅನುಭವವನ್ನು ಪಡೆದರು. ಸೌಂದರ್ಯದ್ಯೋತಕವಾದ ಈ ಸತ್ಯದಲ್ಲಿ ಸಂಘರ್ಷಕ್ಕಿಂತ ಅಧಿಕವಾಗಿ ಶಾಂತಿಯನ್ನೂ, ದ್ವೇಷಕ್ಕಿಂತ ಅಧಿಕವಾದ ಪ್ರೇಮವನ್ನೂ ಕಂಡರು. ಋಷಿಗಳ ದರ್ಶನಕ್ಕೆ ಜಗತ್ತೆಲ್ಲ ಕಾವ್ಯಾತ್ಮಕವಾಗಿ ಕಂಡಿತು. ಈ ಕಾವ್ಯಕ್ಕೆ ಸೃಷ್ಟಿಕರ್ತನಾದ ಈಶ್ವರನೆ ಕವಿ. ಈ ಬಗೆಯ ವಿಶ್ವಸೌಂದರ್ಯವನ್ನನುಭವಿಸಿ ಈ ಸೌಂದರ್ಯತತ್ತ್ವವನ್ನು ತಮ್ಮ ದಿವ್ಯವಾಣಿಯಿಂದ ಋಷಿಗಳು ಪ್ರಶಂಸಿಸಿದ್ದಾರೆ. ಈ ದಿವ್ಯಾನುಭವ ಅವರ 'ಭೂಮ' ದರ್ಶನದ ಫಲ.

### 'ಭೂಮ' ದರ್ಶನವೆಂದರೇನು?

ವೈದಿಕ ಋಷಿಗಳು **"ಭೂಮೈವ ಸುಖಂ; ನಾಲ್ಪೇ ಸುಖಮಸ್ತಿ", ಬೃಹತ್ತಾದುದರಿಂದ ಮಾತ್ರ ಸುಖ; ಅಲ್ಪವಾದುದರಿಂದ ಸುಖವಿಲ್ಲ** – ಮುಂತಾದ ಸಂದೇಶವಾಕ್ಯಗಳಿಂದ ಆತ್ಮಾನಂದಕ್ಕೆ ಸಾಧನ ಯಾವುದು ಎಂಬುದನ್ನು ವಿವರಿಸಿದರು. ಎಲ್ಲಿಯವರೆಗೆ ಮಾನವನಿಗೆ ಈ ದರ್ಶನವಿಲ್ಲವೋ ಅಲ್ಲಿಯವರೆಗೆ ಅವನ ಆನಂದವೂ ಕುಂಠಿತ. ಮಾನವ ತನ್ನ ವ್ಯವಹಾರವನ್ನೆಲ್ಲ ಕೇವಲ ಸ್ವಾರ್ಥಕ್ಕಾಗಿ ಉಪಯೋಗಿಸಿದರೆ ಅದು ದುಃಖಕಾರಕ. ಜಗತ್ತೆಲ್ಲ ತನಗಾಗಿ ಎನ್ನುವ ಅಜ್ಞಾನಿಗೆ ಸುಖವಿಲ್ಲ. ಅಷ್ಟೆ ಅಲ್ಲ, ತನ್ನ ಸೌಖ್ಯವನ್ನು ಮಾತ್ರ ಸಂಪಾದಿಸಲಿಚ್ಛಿಸುವವನು ಪಾಪಿಷ್ಠ. ತಾನು ಜಗತ್ತಿಗಾಗಿ ಎಂಬ ಅರಿವುಂಟಾದರೆ ಆಗ ತ್ಯಾಗ, ಭೋಗ ಎರಡೂ ಲಭ್ಯ ಆಗ ಮಾತ್ರ ಅವನಿಗೆ, ನಿರಂತರವೂ ಲಯಬದ್ಧವೂ ಆದ ಸೃಷ್ಟಿಸ್ಪಂದನದಲ್ಲಿ ತಾನೂ ಭಾಗವಹಿಸುವ ದಿವ್ಯಾನುಭವ ಲಭಿಸುತ್ತದೆ. ಇದೆ ಮಾನವನ ಪರಿಪೂರ್ಣತೆಯ ಲಕ್ಷಣ.

ಮಾನವನಿಗೂ ಅನಂತವಾದ ಜಗತ್ತಿಗೂ ಇರುವ ಸಂಬಂಧ ಜ್ಞಾನವೇ ಅವನ ಪರಿಪೂರ್ಣತೆಗೂ ದಿವ್ಯಾನುಭವಕ್ಕೂ ಆಧಾರ ಮತ್ತು ಸಾಧಕ. ಪರಂಜ್ಯೋತಿಯ ಅಂಶವೇ ಜಗತ್ತು ಎಂಬ ಸಾಕ್ಷಾತ್ಕಾರಜ್ಞಾನವಿಲ್ಲದೆ ಮಾನವನ ಜೀವಿತದಲ್ಲಿ ಪರಿಪೂರ್ಣತೆ ಸಾಧ್ಯವಿಲ್ಲ ಎಂಬುದು ವೇದಕಾಲೀನ ಮಹರ್ಷಿಗಳ ಅಭಿಪ್ರಾಯ.

### ಪರಂಜ್ಯೋತಿ

'ಅಕ್ಷರ'ವೆಂದು ಪ್ರಶಂಸಿತವಾಗಿರುವ ದಿವ್ಯಜ್ಯೋತಿಯೇ ಸಕಲ ಜಗತ್ತಿಗೂ ಮೂಲ. ಅದೇ ಸಕಲ ಜಗತ್ತನ್ನೂ ವ್ಯಾಪಿಸಿದೆ. ಅವನ್ನೆಲ್ಲ ಮೀರಿಯೂ ಇದೆ. ಸಕಲ ಜಗತ್ತುಗಳೂ ಈ ಮೂಲತತ್ತ್ವದಲ್ಲಿ ಹಾಸುಹೊಕ್ಕಾಗಿದೆ. ಸೃಷ್ಟಿ–ಸ್ಥಿತಿ–ಲಯಗಳೆಲ್ಲವೂ ಈ ದಿವ್ಯತತ್ತ್ವದ ಸಂಕಲ್ಪಾನುಸಾರವೇ ನಡೆಯುತ್ತವೆ. ಈ ತತ್ತ್ವದ ಅಂಶವಲ್ಲದ ಬೇರೆ ವಸ್ತು ಜಗತ್ತಿನಲ್ಲಿಲ್ಲ. ಇದರಿಂದ ವ್ಯಾಪಿಸಲ್ಪಡದ ವಸ್ತುವಿಲ್ಲ. ಸಕಲ ವಿಶ್ವಕ್ಕೂ ಈ ಪರಂಜ್ಯೋತಿಯೇ ಮೂಲಸೂತ್ರಾತ್ಮ ಎಂದು ಋಷಿಗಳು ಇದನ್ನು ವರ್ಣಿಸುತ್ತಾರೆ.

ಈ ಸೂತ್ರಾತ್ಮನನ್ನು ಜೇಡರಹುಳುವಿಗೂ, ಅವನಿಂದ ಸೃಷ್ಟವಾದ ಜಗತ್ತನ್ನು ಜೇಡರ ಬಲೆಗೂ ಹೋಲಿಸಿದೆ. ಯಾವ ರೀತಿ ಜೇಡರಹುಳು ತನ್ನ ಸೂತ್ರವನ್ನು ವಿಸ್ತರಿಸಿ ಪುನಃ ಅದನ್ನು ಹಿಂದಕ್ಕೆ ತನ್ನೊಳಗೆ ಎಳೆದುಕೊಳ್ಳುವುದೋ ಅದರಂತೆಯೇ ಸೂತ್ರಾತ್ಮನಾದ ಭಗವಂತನು ಜಗದ್ರೂಪವಾದ ತನ್ನ ಸ್ವರೂಪವನ್ನು ವಿಸ್ತರಿಸಿ ಪುನಃ ತನ್ನಲ್ಲೇ ಲೀನ ಮಾಡಿಕೊಳ್ಳುತ್ತಾನೆ. ಸೃಷ್ಟಿಮೂಲವಾದ ಪುರುಷಶಕ್ತಿಯೂ ಇವನೇ, ಸೃಷ್ಟಿಸಾಧಕವಾದ ಸ್ತ್ರೀಶಕ್ತಿಯೂ ಇವನೇ.

ಈ ಸೃಷ್ಟಿರಹಸ್ಯವನ್ನು ತಿಳಿಯಲು, ಅಲೌಕಿಕವಾದ ಸೃಷ್ಟಿಕರ್ತನ ಈ ಕಾವ್ಯಾತ್ಮಕ ಸೃಷ್ಟಿರಹಸ್ಯವನ್ನರಿಯಲು ಕವಿಹೃದಯ ಅತ್ಯವಶ್ಯ. ಆದರೆ, ಈ ಭಾಗ್ಯ ಎಲ್ಲರಿಗೂ ಲಭಿಸಲು ಸಾಧ್ಯವಿಲ್ಲ. ಎಲ್ಲರೂ ಋಷಿಗಳಾಗಲು ಅರ್ಹರಲ್ಲ. ಆದ್ದರಿಂದ ಸಕಲ ಮಾನವವರ್ಗಕ್ಕೂ ಅರ್ಥವಾಗುವ ರೀತಿಯಲ್ಲಿ ಈ ರಹಸ್ಯವನ್ನು ಲೌಕಿಕವಾದ ರೂಪಕಗಳಿಂದ ದ್ರಷ್ಟಾರರಾದ ಋಷಿಗಳು ವೇದೋಪನಿಷತ್ತುಗಳಲ್ಲಿ ವಿವರಿಸಿದ್ದಾರೆ.

ಸೃಷ್ಟಿಮೂಲದ ಸ್ವರೂಪ ಗ್ರಾಹ್ಯಾತೀತ. ಹೀಗಿದ್ದರೂ ಸೃಷ್ಟಿವೈವಿಧ್ಯದಲ್ಲಿ ಐಕ್ಯವಿದೆಯೆಂದು ಋಷಿಗಳು ಅರಿತರು. ಚೇತನ–ಅಚೇತನಾತ್ಮಕ ಜಗತ್ತಿನಲ್ಲೆಲ್ಲ ಈ ಮೂಲತತ್ತ್ವವೇ ಸರ್ವಾಂತರ್ಯಾಮಿಯಾಗಿದೆ. ಶಕ್ತಿಸೌಂದರ್ಯಗಳ ಪ್ರಕಾಶವಾದ ಈ ತತ್ತ್ವವನ್ನು ಹಂಸ, ಪತಂಗ, ಗಂಧರ್ವ, ಸುಪರ್ಣ, ಗುರುತ್ಮಾನ್ ಮುಂತಾದ ಹೆಸರುಗಳಿಂದ ವೇದಗಳು ವರ್ಣಿಸುತ್ತವೆ. ಇವೆಲ್ಲ ಪರಂಜ್ಯೋತಿಯ ಸೌಂದರ್ಯ ಪ್ರತಿಪಾದಕವಾದ ವಿಶೇಷಣಗಳು.

### ಭಾರತೀಯ ಸಂಸ್ಕೃತಿಯ ಆಂತರಿಕ ಭವ್ಯತೆ

ಹೀಗೆ ಜಗತ್ತಿನ ವೈವಿಧ್ಯದಲ್ಲಿ ಪರಸ್ಪರ ವಿರುದ್ಧಾಂಶಗಳು ತೋರಿದರೂ ಅವುಗಳಲ್ಲಿ ನಿಜವಾದ ಸಾಮರಸ್ಯವನ್ನರಿತು, ಜಗತ್ತನ್ನೆಲ್ಲ ಒಟ್ಟಿಗೆ ಧರಿಸುವ ಶಕ್ತಿಯೇ **ಧರ್ಮ**. ಇದರ ಶಕ್ತಿಯಿಂದಲೇ ಭಾರತ ಸರ್ವಧರ್ಮಸಮನ್ವಯದ ರಂಗವಾಗಿದೆ

ಎಂದು ಹೇಳಬಹುದು. ಪ್ರಬಲವಾದ ವೈಜ್ಞಾನಿಕ ಶಕ್ತಿಯ ಹಿನ್ನೆಲೆಯಿಂದ ಕೂಡಿದ ಪಾಶ್ಚಾತ್ಯ ಸಂಸ್ಕೃತಿಯೂ ಕೂಡ ಭಾರತೀಯ ಸಂಸ್ಕೃತಿಯ ಮುಂದೆ ತನ್ನ ವ್ಯಕ್ತಿತ್ವವನ್ನು ಉಳಿಸಿಕೊಳ್ಳಲಾಗಲಿಲ್ಲ. "ಹೊಸ ಪ್ರವಾಹಗಳಿಂದ ಕೂಡಿದ ನದಿಗಳು ಸಾಗರಕ್ಕೆ ಬಂದು ಸೇರುವಂತೆ ಹೊಸ ಶಕ್ತಿಗಳು ಪ್ರಾಚೀನವೂ ಹಾಗೆಯೇ ಅತ್ಯಂತ ನವೀನವೂ ಆದ ಭಾರತೀಯ ಸಂಸ್ಕೃತಿಯಲ್ಲಿ ಅಂತರ್ಗತವಾಗಿವೆ" ಎಂದು ಶ್ರೀ ಪಣಿಕ್ಕರ್ ಎಂಬ ವಿದ್ವಾಂಸರು, The Foundation of New India ಎಂಬ ತಮ್ಮ ಗ್ರಂಥದಲ್ಲಿ ಹೇಳಿದ್ದಾರೆ. ಈ ವಿಧವಾದ ಸಾಮರಸ್ಯಕ್ಕೆ ಭಾರತೀಯ ಸಂಪ್ರದಾಯದ ಔದಾರ್ಯವೇ ಕಾರಣ. ಪರಮತ ಸಹಿಷ್ಣುತೆ ಈ ಔದಾರ್ಯದ ಫಲ. ವಿಶ್ವದ ರಹಸ್ಯತತ್ತ್ವವನ್ನು ಅರಿಯಲು ಮಾಡಿದ ಎಲ್ಲ ಪ್ರಯತ್ನಗಳಿಗೂ ಭಾರತ ತನ್ನ ಗೌರವ ಸಲ್ಲಿಸಿದೆ. '*ಯೇ ಯಥಾ ಮಾಂ ಪ್ರಪದ್ಯಂತೇ ತಾಂಸ್ತಥೈವ ಭಜಾಮ್ಯಹಮ್*' : **ಯಾರು ಯಾವ ರೀತಿಯಿಂದ ನನ್ನನ್ನು ತಿಳಿದುಕೊಳ್ಳುತ್ತಾರೋ, ಆ ಬಗೆಯಲ್ಲೇ ನಾನು ಅವರನ್ನು ಸಮೀಪಿಸುತ್ತೇನೆ** – ಎಂದು ಭಗವದ್ಗೀತೆಯಲ್ಲಿ ಶ್ರೀಕೃಷ್ಣನು ಹೇಳುತ್ತಾನೆ.

ಮೂಲತತ್ತ್ವದ ಅನಂತವಾದ ಕಲ್ಯಾಣಗುಣಗಳಲ್ಲಿ ಯಾವ ಋಷಿಶಕ್ತಿಗೆ ಯಾವ ಅಂಶ ಭಾಸವಾಗುತ್ತದೆಯೋ ಅದನ್ನು ಆ ಋಷಿ ಪ್ರಶಂಸಿಸುತ್ತಾನೆ. ಆದ್ದರಿಂದ ಮೂಲತತ್ತ್ವವನ್ನು ಹೀಗೆಯೇ ಎಂದು ನಿಷ್ಕೃಷ್ಟವಾಗಿ ವರ್ಣಿಸಲು ಸಾಧ್ಯವಿಲ್ಲ. ಪ್ರತಿಯೊಂದು ಋಷಿದರ್ಶನಕ್ಕೂ ಪೂಜ್ಯತೆಯುಂಟು ಎಂಬ ಶ್ರದ್ಧೆ ಭಾರತೀಯರಲ್ಲಿ ಅನಾದಿಕಾಲದಿಂದ ಇಂದಿನವರೆಗೂ ಮುಂದುವರಿದು ಬಂದಿದೆ. ಸಾವಿರಾರು ವರ್ಷಗಳ ಕಾಲದಲ್ಲಿ ಅನೇಕ ಹೊಸ ಸಂಸ್ಕೃತಿಗಳು ಭಾರತಕ್ಕೆ ಪ್ರವಹಿಸಿ ಬಂದಿವೆ. ಅವೆಲ್ಲವನ್ನೂ ಭಾರತ ಹೃತ್ಪೂರ್ವಕವಾಗಿ ಸ್ವಾಗತಿಸಿ ಎಲ್ಲವನ್ನೂ ತನ್ನದನ್ನಾಗಿ ಮಾಡಿಕೊಂಡಿದೆ.

ಭಾರತೀಯ ಸಂಸ್ಕೃತಿಯ ಅಂತರ್ಗತವಾದ **ಸಮಚಿತ್ತತೆ** ಮತ್ತು **ಪ್ರಶಾಂತತೆ,** ಅದರ ಬಾಹ್ಯ ವ್ಯವಹಾರದಲ್ಲೂ ಪ್ರಭಾವ ಬೀರಿವೆ. ಭಾರತೀಯ ಸಂಸ್ಕೃತಿಯ ಆವಿಷ್ಕಾರಗಳಾದ ನಟರಾಜನ ನಾಟ್ಯ, ತ್ರಿಮೂರ್ತಿಯ ವೈವಿಧ್ಯ ಪ್ರಕಾಶ, ಶಾಸ್ತ್ರೀಯ ಗಾನ ಇತ್ಯಾದಿ ಕಲಾಭಿವ್ಯಕ್ತಿಗಳೂ ಅದರ ಆಂತರಿಕ ಭವ್ಯತೆಯನ್ನು ಪ್ರಕಾಶಪಡಿಸುತ್ತವೆ. ಭಾರತೀಯರು ತಮ್ಮ ಅಂತರಂಗದಲ್ಲಿ ಅನುಭವಿಸಿದ ಈ ಬಗೆಯ ಪ್ರಶಾಂತಿಯ ಫಲವಾಗಿಯೇ, ಅವರ ಪ್ರಾರ್ಥನೆಯಾಗಿ '*ದ್ಯೌಃ ಶಾಂತಿಃ ದಿಶಃ ಶಾಂತಿಃ*': **ಆಕಾಶ ಶಾಂತವಾಗಿರಲಿ, ದಿಕ್ಕುಗಳು ಶಾಂತವಾಗಿರಲಿ**– ಎಂಬ ಸರ್ವಶಾಂತಿಯ ಆಕಾಂಕ್ಷೆ ಅವರ ಮನದಾಳದಿಂದ ನಿರಂತರವಾಗಿ ಅಭಿವ್ಯಕ್ತವಾಗುತ್ತಿದೆ.

ರಾಜಕೀಯವೆಂದರೆ ಸಹಜವಾಗಿ ನಾನಾ ವಿಧವಾದ ಚಿತ್ತಕ್ಷೋಭೆಗೆ ಮೂಲವಾದ ಕ್ಷೇತ್ರ, ಇದರಲ್ಲೂ ಮೇಲೆ ಹೇಳಿದ ಅಪೂರ್ವ ಪ್ರಶಾಂತಿಯನ್ನು ರಾಮ, ಧರ್ಮರಾಜ ಮೊದಲಾದ ಮಹಾತ್ಮರು ಪ್ರಕಾಶಪಡಿಸಿದರು. ಇವರ ಮಹಾತ್ಮೆಯನ್ನು ಪ್ರಶಂಸಿಸಿದ ವಾಲ್ಮೀಕಿ ಮತ್ತು ವ್ಯಾಸರು, ತಮ್ಮ ರಚನೆಗಳಾದ ರಾಮಾಯಣ ಮತ್ತು ಮಹಾಭಾರತಗಳ ಮೂಲಕ ಸುಸಂಸ್ಕೃತವಾದ ಭಾರತೀಯ ಇತಿಹಾಸಕ್ಕೆ ಕಾರಣಪುರುಷರಾಗಿದ್ದಾರೆ. ಕ್ರೌಂಚಪಕ್ಷಿಯ ದುಃಖಕ್ಕೆ ಮರುಗಿದ ವಾಲ್ಮೀಕಿ ಸರ್ವಭೂತಾನುಕಂಪವೆಂದರೆ ಏನು ಎಂಬುದನ್ನು ಉಪದೇಶಿಸಿದರು. ಭಯಂಕರವಾದ ಆಪತ್ಕಾಲದಲ್ಲೂ ಧೈರ್ಯದಿಂದ ಪಾಲಿಸಬೇಕಾದ ಸಮಚಿತ್ತತೆಯನ್ನು, ಸಮದರ್ಶಿತ್ವವನ್ನು ಶ್ರೀಕೃಷ್ಣನ ಗೀತೆಯ ಮೂಲಕ ವ್ಯಾಸರು ನಮಗೆ ತಿಳಿಸಿದ್ದಾರೆ. ರಾಜಕೀಯ ಕ್ಷೇತ್ರದಲ್ಲಾಗಲೀ ಸಾಮಾಜಿಕ ಜೀವನದಲ್ಲಾಗಲೀ ಎಂಥ ಕಠಿಣ ಸನ್ನಿವೇಶವೊದಗಿದರೂ ಈ ಬಗೆಯ ಉಪದೇಶಗಳನ್ನು ಪಾಲಿಸುವ ಆತ್ಮಶಕ್ತಿಯನ್ನು ಗಾಂಧಿ ಪ್ರಕಾಶಪಡಿಸಿದರು. ಮಹತ್ತಾದ ಆತ್ಮವುಳ್ಳ ಈ ಮಹಾಪುರುಷನನ್ನು ಜಗತ್ತು ಮಹಾತ್ಮ ಎಂದು ಕೊಂಡಾಡಿತು.

ಅಹಿಂಸೆ, ಸತ್ಯ, ಅಕ್ರೋಧ, ತ್ಯಾಗ, ಸರ್ವಭೂತದಯೆ, ಕ್ಷಮೆ, ಅದ್ರೋಹ, ನಿರಂಹಕಾರ ಇತ್ಯಾದಿ ಗುಣಗಳನ್ನು ಪೋಷಿಸಿದ ಭಾರತೀಯ ಸಂಸ್ಕೃತಿ ಮತ್ತು ಸಮಾಜಗಳು ಜಗತ್ಕಲ್ಯಾಣವನ್ನೇ ದೃಷ್ಟಿಯನ್ನಾಗಿರಿಸಿಕೊಂಡಿವೆ. ಈ ಕಲ್ಯಾಣ ಗುಣಗಳ ಪೋಷಣೆಗೆ '*ಸರ್ವಂ ಬ್ರಹ್ಮಮಯಮ್*'– ಎಲ್ಲವೂ ಬ್ರಹ್ಮವೇ ಎಂಬ ದರ್ಶನವೇ ಆಧಾರ. ಈ ದಿವ್ಯದರ್ಶನ ಪಡೆದ ಮಹರ್ಷಿಗಳ ಸಂದೇಶಪಾಲನೆ ಭಾರತದಲ್ಲಿ ನಿರಂತರವಾಗಿ ಇನ್ನೂ ಮುಂದುವರಿಯುತ್ತಿದೆ. ಇಂತಹ ದಿವ್ಯ ದರ್ಶನದ ಪ್ರಭಾವ ಲೋಕದಲ್ಲೆಲ್ಲ ಹರಡಲಿ, ಇದರಿಂದ ಜಗತ್ತಿಗೆಲ್ಲ ಕಲ್ಯಾಣವಾಗಲಿ ಎನ್ನುವುದೇ ವೇದಕಾಲೀನ ಋಷಿಮುನಿಗಳ ಹೃದಯದಾಳದಲ್ಲಿ ಮೂಡಿಬಂದ ಪ್ರಾರ್ಥನೆಯಾಗಿದೆ.

ಭದ್ರಂ ಕರ್ಣೇಭಿಃ ಶೃಣುಯಾಮ ದೇವಾಃ
ಭದ್ರಂ ಪಶ್ಯೇಮಾಕ್ಷಭಿರ್ಯಜತ್ರಾಃ

**ಹೇ ದೇವತೆಗಳೇ, ಮಂಗಳವಾದುದನ್ನು ಕಿವಿಗಳಿಂದ ಕೇಳೋಣ; ಹೇ ಪೂಜಾರ್ಹರೇ, ಪವಿತ್ರವಾದುದನ್ನು ಕಣ್ಣುಗಳಿಂದ ನೋಡೋಣ.**

**ಒಂದು ಮಾತಿನಲ್ಲಿ ಹೇಳುವುದಾದರೆ, ವೇದಾಂತದ ಆದರ್ಶವೇ, ಮಾನವನ ನೈಜಸ್ಥಿತಿಯನ್ನು ಅರಿಯುವುದು. ನಿನ್ನ ಕಣ್ಣೆದುರಿಗೆ ಇರುವ ದೇವರ ವ್ಯಕ್ತರೂಪವಾದ ಸಹೋದರ ಮಾನವನನ್ನೇ ಪೂಜಿಸಲು ಆಗದೆ ಇದ್ದರೆ, ಅವ್ಯಕ್ತನಾದ ದೇವರನ್ನು ನೀನು ಹೇಗೆ ಪೂಜಿಸಬಲ್ಲೆ ಎಂಬುದೇ ವೇದಾಂತದ ಸಂದೇಶ.** – ಸ್ವಾಮಿ ವಿವೇಕಾನಂದ